ಕರ್ನಾಟಕ ವಿಧಾನಸಭೆ

ಸೋಮವಾರ 7ನೇ ಮಾರ್ಚ್ 2011ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-26 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯ ರವರು ಪೀಠವನ್ನು ಅಲಂಕರಿಸಿದ್ದರು

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಿದ ಉತ್ತರಗಳು

ಆನೆಗಳ ಹಾವಳಿಯಿಂದ ರೈತರ ಪ್ರಾಣ ಹಾನಿ

76 (416) ಶ್ರೀ ನರೇಂದ್ರ ಆರ್ (ಹನೂರು) ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹನೂರು ಕ್ಷೇತ್ರದ ಅನೇಕ ಭಾಗಗಳಲ್ಲಿ ಆನೆಗಳ ಹಾವಳಿಯಿಂದ ರೈತರ ಪ್ರಾಣ ಹಾಗೂ ಬೆಳೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಾನಿಯ ಸಂಬಂಧ ಪರಿಹಾರ ವಿತರಿಸದಿರುವುದು ಹಾಗೂ ಪರಿಹಾರ ನೀಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು):

ಅ) ಹೌದು.

ಆ) ಆನೆಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ, ಬೆಳೆ ನಷ್ಟ ಸಾಕು ಪ್ರಾಣಿಗಳ ಜೀವ ಹಾನಿಗೆ ಆಗಿಂದ್ದಾಗ್ಗೆ ಸರ್ಕಾರದ ಆದೇಶಾನುಸಾರ ದಯಾತ್ಮಕ ಧನವನ್ನು ಆಯಾ ಪ್ರಕರಣಕ್ಕೆ ತಕ್ಕಂತೆ ಮಂಜೂರು ಮಾಡಿ ವಿತರಿಸಲಾಗುತ್ತಿದೆ.

ಈವರೆಗೆ ಹನೂರು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ದಯಾತ್ಮಕ ಧನ ನೀಡಿರುವ ಪ್ರಕರಣಗಳ ವಿವರಗಳು ಕೆಳಕಂಡಂತೆ ಇವೆ:

ವರ್ಷ	ಬೆಳೆ ಹಾನಿ		ಮಾನವ ಹಾನಿ		ಸಾಕು ಪ್ರಾಣಿ ಹತ್ಯೆ	
	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣ ಸಂಖ್ಯೆ	ಮೊತ್ತ	ಪ್ರಕರಣ ಸಂಖ್ಯೆ	ಮೊತ್ತ
1	2	3	4	5	6	7
2008-09	553	6,39,105	4	5,50,000	–	–

1	2	3	4	5	6	7
2009–10	734	11,78,164	4	6,00,000	–	–
2010–11	241	6,80,426	1	1,50,000	3	10,000
2010–11 ಬಾಕಿಯಿರುವ ಪ್ರಕರಣಗಳು	75	3,75,000	–	–	–	–

ಬಾಕಿಯಿರುವ ಪ್ರಕರಣಗಳಿಗೆ ಶೀಘ್ರದಲ್ಲಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಆರ್. ನರೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ನೀಡಿರುವ ಉತ್ತರದಲ್ಲಿ 2010–11ನೇ ಸಾಲಿನಲ್ಲಿ ಮಾನವ ಹಾನಿ ಕೇವಲ ಒಂದು ಮಾತ್ರ ಆಗಿದ್ದು ಒಂದೂವರೆ ಲಕ್ಷ ರೂಪಾಯಿಗಳನ್ನು ಪರಿಹಾರ ವಿತರಣೆ ಮಾಡಲಾಗಿದೆ ಎಂದು ಇದೆ. ಆದರೆ, ಅಧಿಕಾರಿಗಳು ಸಚಿವರಿಗೆ ಸರಿಯಾದ ಮಾಹಿತಿಯನ್ನು ನೀಡಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, 2010–11ರಲ್ಲಿ ನನ್ನ ಮತ ಕ್ಷೇತ್ರದಲ್ಲಿ ಇಬ್ಬರು ವ್ಯಕ್ತಿಗಳು ಸತ್ತಿದ್ದಾರೆ. ಅವರಲ್ಲಿ ಒಬ್ಬರಿಗೆ ಮಾತ್ರ ಪರಿಹಾರ ಕೊಟ್ಟಿದ್ದಾರೆ. ಇನ್ನೊಬ್ಬ ಮಾದ್ಯಯ S/o ಕಾಳಿಯಪ್ಪ ಎಂದು ಒಡಕೆಹಳ್ಳ ಕೌಡಳ್ಳಿ ರೇಂಜ್‌ಗೆ ಸೇರುತ್ತದೆ, ಇವರು ಸತ್ತು ಹೋಗಿ ಸುಮಾರು ಒಂದು ವರ್ಷವಾಯಿತು. ಒಂದು ವರ್ಷದಿಂದ ಅನೇಕ ಬಾರಿ ಮನವಿ ಸಲ್ಲಿಸಿದರೂ ಸಹ ಇದುವರೆಗೂ ಅವರಿಗೆ ಪರಿಹಾರ ಕೊಟ್ಟಿಲ್ಲ. ಮೊದಲನೆಯದಾಗಿ, ಆನೆಗಳ ಹಾವಳಿಯಿಂದು ಸಾಯುವವರು ಬಡವರು, ಕೃಷಿ ಕಾರ್ಮಿಕರು. ಅವರುಗಳಿಗೆ ಒಂದೊಂದ ವರ್ಷವಾದರೂ ಪರಿಹಾರ ವಿತರಣೆ ಮಾಡದಿದ್ದರೆ, ಅವರು ಜೀವನ ಸಾಗಿಸುವುದು ಯಾವ ರೀತಿ ಎಂದು ಕೇಳಬಯಸುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್: ಪರಿಹಾರ ಕೊಡುವಂಥ ವಿಚಾರದಲ್ಲಿ ಸರ್ಕಾರ ಯಾವತ್ತೂ ಹಿಂದು ಮುಂದು ನೋಡಿಲ್ಲ. ನೋಡುವುದೂ ಇಲ್ಲ. ವರದಯಾದಂಥ ಪ್ರಕರಣಗಳ ಹಿನ್ನೆಲೆಯಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ ಮತ್ತು ಸಕಾಲದಲ್ಲಿ ಪರಿಹಾರ ಕೊಡುವಂಥ ಕೆಲಸವನ್ನೂ ಮಾಡಿದೆ. ಮಾನ್ಯ ಶಾಸಕರು ಸಹಜವಾಗಿ ಕಾಡಿನ ಭಾಗದಿಂದ ಬಂದಂಥವರಿದ್ದಾರೆ. ಏನಾದರೂ ವರದಿಯಾಗದೆ, ಕೈಬಿಟ್ಟು ಹೋದಂಥ ಪ್ರಕರಣಗಳಿದ್ದರೆ, ಆ ರೀತಿಯ ಸನ್ನಿವೇಶಗಳಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ, ನಿಶ್ಚಿತವಾಗಿ ನಾನು

ಕಡತವನ್ನು ತರಿಸಿ ಪರಿಶೀಲನೆ ಮಾಡುತ್ತೇನೆ. ಯಾವುದಾದರೂ ಕುಟುಂಬಕ್ಕೆ ಅನ್ಯಾಯವಾಗಿದ್ದರೆ ಸಕಾಲದಲ್ಲಿ ಪರಿಹಾರ ಅವರಿಗೆ ಸಿಗ ಲ್ಲವೆಂದಾದರೆ, ನಿಶ್ಚಿತವಾಗಿ ನಾನು ಅದರ ಕಡೆಗೆ ಗಮನವನ್ನು ಕೊಟ್ಟು, ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಆರ್. ನರೇಂದ್ರ: ಸರ್ಕಾರಕ್ಕೆ ವರದಿಯೂ ಹೋಗಿದೆ. D.F.Oರವರು ನಮಗೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ, ನಮ್ಮ ಹತ್ತಿರ ಹಣ ಇಲ್ಲ, ಹಣ ಬರುತ್ತದೆಂದು ಹೇಳುತ್ತಾರೆ. ಇದನ್ನೇ ಒಂದು ವರ್ಷದಿಂದ ಹೇಳಿಕೊಂಡು ಬರುತ್ತಿದ್ದಾರೆ. ದಯವಿಟ್ಟು, ಆದಷ್ಟು ಬೇಗ ಹಣವನ್ನು ಕೊಡಿಸಿಕೊಡಿ.

ಶ್ರೀ ಸಿ.ಹೆಚ್. ವಿಜಯಶಂಕರ್: ಮಾನ್ಯ ಶಾಸಕರ ಬಗ್ಗೆ ನನಗೆ ವಿಶೇಷವಾದ ಗೌರವವಿದೆ. ಅವರ ಹತ್ತಿರ ಇರುವ ಮಾಹಿತಿಯನ್ನು ನನಗೆ ಕೊಟ್ಟರೆ, ನಿಶ್ಚಿತವಾಗಿ ಅವರ ಭಾವನೆಗೆ ನಾನು ಸ್ಪಂದಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ಈ ಶಾಸಕರ ಬಗ್ಗೆ ವಿಶೇಷ ಗೌರವ ಹೊಂದಿದ್ದೇನೆ ಎಂದು ಮಾನ್ಯ ಮಂತ್ರಿಯವರು ಹೇಳಿದರು. ಆದರೆ, ನಾಡಿನಿಂದ ಬಂದಂಥ ಕಾಡು ಇಲ್ಲದೇ ಇರುವ ಪ್ರದೇಶದ ಬಗ್ಗೆ ಅವರ ಅಭಿಪ್ರಾಯವೇನೆಂಬುದನ್ನು ನೀವು ಯಾರೂ ಕೇಳಲಿಲ್ಲ!

ಶ್ರೀ ಆರ್. ನರೇಂದ್ರ: ಆನೆ ಹಾವಳಿಯಿಂದ ಕಬ್ಬು, ಬಾಳೆ ಎಲ್ಲಾ ಹಾಳಾಗುತ್ತಿದೆ. ನಿರಂತರವಾಗಿ ವರ್ಷವೆಲ್ಲ 2–3 ತಿಂಗಳಿಗೊಮ್ಮೆ ಆನೆ ಹಾವಳಿ ನಡೆಯುತ್ತಿದೆ. ಇದರ ಬಗ್ಗೆಯೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎನ್. ಸಂಪಂಗಿ: ಪ್ರಾಣಿಗಳೂ ನಗರ ಪ್ರದೇಶಗಳಿಗೆ ಬಂದು ಸಾಯುತ್ತಿವೆ. ಈ ಬಗ್ಗೆ ಮಂತ್ರಿಯವರು ಏನು ಮಾಡುತ್ತಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಇವತ್ತು ಚಿರತೆ, ಮತ್ತಿತರ ಪ್ರಾಣಿಗಳು ಬೆಂಗಳೂರು ನಗರದೊಳಗೆ ಬರುತ್ತಿವೆ, ಸಾಯುತ್ತಿವೆ. ಆ ಪ್ರಾಣಿಗಳನ್ನು ಯಾವ ತರಹ ರಕ್ಷಣೆ ಮಾಡುತ್ತಿದ್ದಾರೆನ್ನುವ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು.

ಸಾವಳಗಿ ಭಾಗದ ಜಮೀನಿಗೆ ನೀರಾವರಿ

77 (68) ಶ್ರೀ ಶ್ರೀಕಾಂತ ಸುಬ್ಬಾರಾವ ಕುಲಕರ್ಣಿ (ಜಮಖಂಡಿ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?